**7. <u>ಲಿಖಿತ ಪರೀಕ್ಷೆ:</u>** ಅರ್ಹ ಅಭ್ಯರ್ಥಿಗಳಿಗೆ 150 ಅಂಕಗಳಿಗೆ ವಸ್ತುನಿಷ್ಠ ಮಾದರಿಯ ಎರಡು ಪತ್ರಿಕೆಗಳನ್ನೊಳಗೊಂಡ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯನ್ನು ನಡೆಸಲಾಗುವುದು.

ಎ) **ಪತ್ರಿಕೆ–1: ಸಾಮಾನ್ಯ ಪತ್ರಿಕೆ–** ಸಾಮಾನ್ಯ ಅಧ್ಯಯನ, ಸಾಮಾನ್ಯ ವಿಜ್ಞಾನ ಮತ್ತು ವಿಧಿ ವಿಜ್ಞಾನ ಪ್ರಯೋಗಾಲಯಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಾಧಾರಿತ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ–75 ಅಂಕಗಳು [ಸಮಯ: 01 ಗಂಟೆ 30 ನಿಮಿಷಗಳು]

ಬಿ) **ಪತ್ರಿಕೆ–2: ನಿರ್ದಿಷ್ಠ ಪತ್ರಿಕೆ–** ವಿಷಯಾಧಾರಿತ ಪ್ರಶ್ನೆ ಪತ್ರಿಕೆಯಾಗಿದ್ದು, ಆಯಾ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ–75 ಅಂಕಗಳು [ಸಮಯ: 01 ಗಂಟೆ 30 ನಿಮಿಷಗಳು]

ಸಿ) ಯಾವುದೇ ರೀತಿಯ ಋಣಾತ್ಮಕ ಅಂಕಗಳು ಇರುವುದಿಲ್ಲ.

**8. <u>ಪಠ್ಯಕ್ರಮ:</u>** ಪ್ರತಿ ಹುದ್ದೆಗೆ ನಿಗದಿಪಡಿಸಲಾಗಿರುವ ವಿದ್ಯಾರ್ಹತೆಯನುಸಾರ ಪಠ್ಯಕ್ರಮವನ್ನು ತಯಾರಿಸಿ, ಇಲಾಖೆಯ ಅಧಿಕೃತ ವೆಬ್‌ಸೈಟ್ https://recruitment.ksp.gov.in ನಲ್ಲಿ ಪ್ರಕಟಿಸಲಾಗುವುದು. ಒಂದೇ ವಿದ್ಯಾರ್ಹತೆಯನ್ನು ಹೊಂದಿರುವ ವಿಭಾಗಗಳಿಗೆ ಒಂದೇ ಪಠ್ಯ ಕ್ರಮವನ್ನು ನೀಡಲಾಗುವುದು. ಅಭ್ಯರ್ಥಿಗಳು ತಮ್ಮ ಅರ್ಜಿ ನಮೂನೆಯಲ್ಲಿ ಆದ್ಯತೆಯನ್ನು ನಮೂದಿಸುವುದು.